**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1646/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮಧುಸೂದನ್ | ಫಿರ್ಯಾದಿ ಸಾಕ್ಷಿ-2 |
| ತಂದೆಯ ಹೆಸರು | : ಗೋಪಾಲಗೌಡ | ಚಾಸಾ-2 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ 05.08.2025. |
| ವಾಸಸ್ಥಳ | : ಹಾಲೂರು. | |

**:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ. ಚಾಸಾ-1 ರವರ ಪರಿಚಯ ನನಗಿದೆ. ಚಾಸಾ-3 ಮತ್ತು 4 ರವರ ಪರಿಚಯವೂ ಸಹಾ ನನಗಿದೆ.

ದಿ.13.03.2022 ರಂದು ರಾ.8.00 ಗಂಟೆ ಸಮಯಕ್ಕೆ ನಾನು, ಚಾಸಾ-3 ಮತ್ತು 4 ರವರೊಂದಿಗೆ ಚಾಸಾ-1 ರವರ ಮನೆಯ ಬಳಿ ಮಾತನಾಡುತ್ತಾ ನಿಂತಿದ್ದಾಗ ಚಾಸಾ-1 ರವರ ಮನೆಯೊಳಗೆ ಗಲಾಟೆಯಾಗುತ್ತಿದುದು ಕೇಳಿಸಿತು. ಅಲ್ಲಿ ಚಾಸಾ-1 ರವರ ಮೇಲೆ ಆರೋಪಿತರು ಜಗಳ ಮಾಡಿ ಕೆಟ್ಟದಾಗಿ ಬೈಯುತ್ತಿದ್ದರು. 2 ನೇ ಆರೋಪಿಯು ಚಾಸಾ-1 ರವರ ಕೂದಲು ಹಿಡಿದು ಎಳೆದಾಡಿ ಕೆಟ್ಟದಾಗಿ ಬೈಯುತ್ತಿದ್ದರು. 3 ನೇ ಆರೋಪಿಯು ಚಾಸಾ-1 ರವರ ಕೆನ್ನೆಗೆ ಹೊಡೆದರು. 1 ನೇ ಆರೋಪಿಯು ಕತ್ತಿಯಿಂದ ಚಾಸಾ-1 ರವರಿಗೆ ಹೊಡೆಯಲು ಹೋದಾಗ ಅವರು ಕೈಯನ್ನು ಅಡ್ಡಕೊಟ್ಟಿದ್ದು ಚಾಸಾ-1 ರವರ ಕೈಗೆ ಗಾಯವಾಯಿತು. ಚಾಸಾ-1 ರವರಿಗೆ ಜೀವ ಬೆದರಿಕೆಯನ್ನು ಸಹಾ ಹಾಕಿರುತ್ತಾರೆ. ನಾವು ಜಗಳ ಬಿಡಿಸಿದ್ದು 1 ನೇ ಆರೋಪಿಯು ಕತ್ತಿಯನ್ನು ಎಸೆದು ಹೋದರು. ಅದನ್ನು ಚಾಸಾ-1 ರವರೇ ತೆಗೆದು ಮನೆಯ ಒಳಗೆ ಇಟ್ಟರು. ನಂತರ ಚಾಸಾ-1 ರವರನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು.

ಸಾಕ್ಷಿಯು ಎಂ.ಒ.1 ನ್ನು ನೋಡಿ 1 ನೇ ಆರೋಪಿಯು ಅದನ್ನೇ ಹಿಡಿದುಕೊಂಡು ಚಾಸಾ-1 ರವರಿಗೆ ಹೊಡೆಯಲು ಹೋಗಿದ್ದರು ಎಂದು ಗುರುತಿಸುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:**

ಈ ದಿನ ಚಾಸಾ-1 ರವರು ಸಹಾ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ನಾನು, ಚಾಸಾ-1, ಚಾಸಾ-3 ಮತ್ತು 4 ರವರು ಒಂದೇ ಊರಿನವರು ಎಂದರೆ ಸರಿ. ನನ್ನ ಮನೆಯಿಂದ ಚಾಸಾ-1 ರವರ ಮನೆ 100 ಮೀಟರ್ ದೂರದಲ್ಲಿ ಇದೆ. ನಮ್ಮಿಬ್ಬರ ಮನೆಗಳ ನಡುವೆ ಚಾಸಾ-3 ರವರ ಮನೆ ಇದೆ. ಚಾಸಾ-4 ರವರು ಚಾಸಾ-1 ರವರ ಅಕ್ಕನ ಮಗ. ನಾವು ಆ ದಿನ ರಾ.7.30 ಗಂಟೆ ಸಮಯಕ್ಕೆ ಚಾಸಾ-1 ರವರ ಮನೆಯ ಬಳಿ ಹೋಗಿದ್ದೆವು. ಆ ಸಮಯಕ್ಕೆ ಆರೋಪಿತರು ಮನೆಯ ಒಳಗೆ ಇದ್ದರು. 3 ನೇ ಆರೋಪಿ ಮತ್ತು ಚಾಸಾ-1 ರವರ ತಾಯಿ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಅವರು ಮೊದಲು ಊರಿನಲ್ಲಿ ಇದ್ದರು ಎಂದು ನುಡಿಯುತ್ತಾರೆ. 1 ಮತ್ತು 2 ನೇ

ಆರೋಪಿತರು ಬೆಂಗಳೂರಿನ ವಾಸಿಗಳು ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಚಾಸಾ-1 ರವರ ವಿರುದ್ಧ ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇರೀತಿ ಚಾಸಾ-1 ರವರು ಸಹಾ ವಿಭಾಗ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ರಾ.8.00 ಗಂಟೆಗೆ ಗಲಾಟೆ ಪ್ರಾರಂಭವಾಯಿತು. ಆ ದಿನ ಚಾಸಾ-1 ರವರ ಅತ್ತೆ ಮನೆಯಲ್ಲಿಯೇ ಇದ್ದರು. ಚಾಸಾ-1 ರವರು ತನ್ನ ಅತ್ತೆಯೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸರಿ.

ಬೇವರ್ಸಿ ಎಂದು ಹಾಗೂ ಇತರೆ ಕೆಟ್ಟ ಪದಗಳಿಂದ ಆರೋಪಿತರು ಚಾಸಾ-1 ರವರನ್ನು ಬೈಯ್ಯುತ್ತಿದ್ದರು. ನಾವು ಜಗಳ ಬಿಡಿಸಲು ಹೋದಾಗಲೇ 1 ನೇ ಆರೋಪಿಯ ಕತ್ತಿಯನ್ನು ತಂದರು. ಕತ್ತಿಯನ್ನು ಮನೆಯ ಒಳಗಿನಿಂದಲೇ ತಂದಿದ್ದರು. ಚಾಸಾ-1 ರವರು ತನ್ನ ಎರಡು ಕೈಗಳನ್ನು ಅಡ್ಡ ಕೊಟ್ಟಿದ್ದು ಅವರ ಎಡಗೈನ ಮಧ್ಯದ ಬೆರಳು ಹಾಗೂ ಬಲಗೈನ ಉಂಗುರ ಬೆರಳಿಗೆ ಪೆಟ್ಟಾಯಿತು. ಆ ದಿನ ಚಾಸಾ-1 ರವರ ಕೈಯಿಂದ ರಕ್ತ ಬರುತ್ತಿತ್ತು, ಆದರೆ ಅವರ ಬಟ್ಟೆಗೆ ಮತ್ತು ನೆಲಕ್ಕೆ ರಕ್ತ ತಾಗಿರಲಿಲ್ಲ. ಕತ್ತಿಯ ಮೇಲೆ ರಕ್ತದ ಕಲೆಗಳು ಇರಲಿಲ್ಲ. ಆ ದಿನ ಆರೋಪಿ ಹಿಡಿದಿದ್ದ ಕತ್ತಿಯ ತುದಿ ಮೊಂಡಾಗಿರಲಿಲ್ಲ. ಎಂ.ಒ.1 ರ ತುದಿ ಮೆಂಡಾಗಿದೆ ಎಂದರೆ ಸರಿ. ಎಂ.ಒ.1 ರ ಕತ್ತಿಗಳನ್ನು ತೋಟದ ಕೆಲಸಕ್ಕೆ ಉಪಯೋಗಿಸುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ಕತ್ತಿಯನ್ನು ಮನೆಯ ಕಿಟಕಿಯ ಮೇಲೆ ಇಟ್ಟು ಹೋಗಿದ್ದರು. ಆ ಕತ್ತಿಯನ್ನು ಚಾಸಾ-1 ರವರು ತಮ್ಮ ರೂಮಿಗೆ ತೆಗೆದುಕೊಂಡು ಹೋಗಿ ಇಟ್ಟುಕೊಂಡರು.

ನನ್ನ ಕಾರಿನಲ್ಲಿ ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಪೋಲಿಸರ ಮುಂದೆ ನಾನು ಹೇಳಿಕೆ ಕೊಟ್ಟಿಲ್ಲ. ನಾನು ಮತ್ತು ಚಾಸಾ-1 ರವರು ಒಂದೇ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿವಿಲ್ ವ್ಯಾಜ್ಯಕ್ಕೆ ಅನುಗುಣವಾಗುವಂತೆ ಚಾಸಾ-1 ರವರು ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕದಂದು ನಾನು, ಚಾಸಾ-1, 3 ಮತ್ತು 4 ರವರು ಸೇರಿ 1 ನೇ ಆರೋಪಿಗೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ 1 ನೇ ಆರೋಪಿ ನನ್ನ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪ್ರಭಾವ ಬೀರಿ ಸದರಿ ಪ್ರಕರಣ ದಾಖಲಾಗದಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.